ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ
(ಸಹಭಾಗಿತ್ವದ - ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಉದ್ಯಮ)
ನೊಂದಾಯಿತ ಕಚೇರಿ : ಬಿ.ಎಂ.ಟಿ.ಸಿ. ಕಾಂಪ್ಲೆಕ್ಸ್, 3ನೇ ಮಹಡಿ, ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ
ಬೆಂಗಳೂರು - 560 027. ಭಾರತ

Bangalore Metro Rail Corporation Ltd.
(A Joint Venture of Government of Karnataka & Government of India)
Regd. Office : B.M.T.C. Complex, 3rd Floor, K.H. Road, Shanthinagar,
Bangalore - 560 027. INDIA

ಸಂಖ್ಯೆ:ಬೆಂ.ಮೆ.ರೈ.ನಿ.ನಿ/ಸಿಪಿಆರ್‌ಓ/ಪ್ರತಿಕಾಪ್ರಕಟಣೆ/2017-18/168 ದಿನಾಂಕ: 02.05.2017

**<u>ಪತ್ರಿಕಾ ಪ್ರಕಟಣೆ</u>**

ಉತ್ತರ-ದಕ್ಷಿಣ ಮೆಟ್ರೋ ಮಾರ್ಗದ ಸಂಪಿಗೆ ರಸ್ತೆ ಮತ್ತು ನ್ಯಾಷನಲ್ ಕಾಲೇಜು ನಡುವಣ ಬರುವ ಸುರಂಗ ಮಾರ್ಗದಲ್ಲಿರುವ ಮೆಟ್ರೋ ನಿಲ್ದಾಣಗಳಲ್ಲಿ ಸಿಗ್ನಲಿಂಗ್/ಟ್ರೈನ್ ನಿಯಂತ್ರಣ ಮತ್ತು ಟನಲ್ ವೆಂಟಿಲೇಷನ್ ಸಿಸ್ಟಂಗಳ ಪರೀಕ್ಷೆಯನ್ನು ನಡೆಸಲಾಗುತ್ತದೆ. ಈ ಕಾರಣದಿಂದಾಗಿ ರಾಜಾಜಿನಗರದಿಂದ ಸಂಪಿಗೆ ರಸ್ತೆ ಮೆಟ್ರೋ ನಿಲ್ದಾಣಗಳ ನಡುವೆ ನಾಲ್ಕುದಿನಗಳ ಅವಧಿಗೆ (ಉಭಯ ದಿನಗಳು ಸೇರಿದಂತೆ) ಅಂದರೆ ದಿನಾಂಕ: 04.05.2017 ರಿಂದ 07.05.2017 ರವರೆಗೆ ಮೆಟ್ರೋ ರೈಲು ವಾಣಿಜ್ಯ ಸಂಚಾರವನ್ನು ನಿಲ್ಲಿಸಲಾಗಿದೆ. ಸದರಿ ದಿನಾಂಕಗಳಂದು ನಾಗಸಂದ್ರ ದಿಂದ ರಾಜಾಜಿನಗರದವರೆಗೆ ಮೆಟ್ರೋ ರೈಲು ಸಂಚಾರವಿರುತ್ತದೆ ಎಂದು ಸಾರ್ವಜನಿಕರಿಗೆ ತಿಳಿಯಪಡಿಸಿದೆ.

ಈ ಅವಧಿಯಲ್ಲಿ ರಾಜಾಜಿನಗರ ಮತ್ತು ಕೆಂಪೇಗೌಡ ನಿಲ್ದಾಣ, ಮೆಜೆಸ್ಟಿಕ ನಡುವೆ ಬಿಎಂಟಿಸಿ ಫೀಡರ್ ಬಸ್ಸುಗಳ ಸೇವೆಯ ಲಭ್ಯವಿರುತ್ತದೆ.

ಈ ಮೇಲಿನ ಪ್ರಕಟಣೆಯನ್ನು ನಿಮ್ಮ ದಿನಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ಸಾರ್ವಜನಿಕರ ಮಾಹಿತಿ/ಉಪಯೋಗಕ್ಕಾಗಿ ಪ್ರಕಟಿಸುವಂತೆ ಕೋರಿದೆ.

ಯು.ಎ. ವಸಂತ್ ರಾವ್
ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

**ಇವರಿಗೆ:**

ಸಂಪಾದಕರು/ಪ್ರತಿಕೋದ್ಯಮ/ದೃಷ್ಯ/ ಮುದ್ರಣ ಮಾಧ್ಯಮ/ಎಫ್.ಎಂ.ರೇಡಿಯೋ ಚಾನಲ್‌ಗಳು : ಈ ಮೇಲಿನ ಪತ್ರಿಕಾ ಪ್ರಕಟಣೆಯನ್ನು ತಮ್ಮ ದಿನಪತ್ರಿಕೆ/ಮಾಧ್ಯಮಗಳಲ್ಲಿ ಪ್ರಕಟಿಸಿ ಪ್ರಯಾಣಿಕರ ಗಮನಕ್ಕೆ ತರಲು ತಮ್ಮನ್ನು ಕೋರಲಾಗಿದೆ.

Phone : +91-(0)80-2296 9300 / 22969301, Fax : + 91-(0)80-2296 9222, E-mail : bmrcl@dataone.in Web : www.bmrc.co.in
CIN No. : U16286KA1994GOI016286